ಧಾರವಾಡ ಜಿಲ್ಲಾ ಶಸ್ತ್ರ ಚಿಕಿತ್ಸಾ ದವಖಾನೆಯಲ್ಲಿ ಖಾಲಿ ಇರುವ ಹುದ್ದೆಗಳು

4053 (4730) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡವು ಜಿಲ್ಲಾ ಶಸ್ತ್ರ ಚಿಕಿತ್ಸಾ ದವಾಖಾನೆ ಯಾವ ವರ್ಷ ಪ್ರಾರಂಭಿಸಲಾಗಿದೆ? ಅದರ ಬೆಳವಣಿಗೆಯ ದೃಷ್ಟಿಯಿಂದ ಎಷ್ಟು ಹಾಸಿಗೆಗಳನ್ನು ಹೆಚ್ಚಿಸಿದೆ.

ಆ) ದವಾಖಾನೆಯಲ್ಲಿ ಯಾವ ತಜ್ಞರ ಹುದ್ದೆ ಕೊರತೆ ಇದೆ?

ಇ) ಯಾವ ವೈದ್ಯಕೀಯ ಉಪಕರಣಗಳ ಕೊರತೆ ಜಿಲ್ಲಾ ಆಸ್ಪತ್ರೆಯಲ್ಲಿದೆ? ಹೃದಯ ಚಿಕಿತ್ಸೆಗೆ ಬೇಕಾಗುವ ಉಪಕರಣಗಳ ಅಗತ್ಯತೆ ಇಲ್ಲವೆ? ವಿವರ ನೀಡುವುದು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಜಿಲ್ಲಾ ಆಸ್ಪತ್ರೆ ಧಾರವಾಡವು 1881 ಸಾಲಿನಲ್ಲಿ ಪ್ರಾರಂಭವಾಗಿದೆ. ಈ ಆಸ್ಪತ್ರೆಯನ್ನು 170 ಹಾಸಿಗೆಯಿಂದ 250 ಹಾಸಿಗೆಗೆ ಹೆಚ್ಚಿಸಲಾಗಿದೆ.

ಆ) ಈ ಹುದ್ದೆಗಳ ಕೊರತೆ ಇರುತ್ತದೆ.

1. ವೈದ್ಯಕೀಯ ತಜ್ಞರು – 1
2. ಸ್ತ್ರೀ ರೋಗ ತಜ್ಞರು – 1
3. ಪೆಥಾಲೊಜಿ ತಜ್ಞರು – 1
4. ಸೈಕ್ಯಾಟ್ರಿಸ್ಟ್ ತಜ್ಞರು – 1

ಇ) ಈ ಆಸ್ಪತ್ರೆಗೆ ದಂತ ವಿಭಾಗಕ್ಕೆ ಡೆಂಟಲ್ ಚೇರ್ ಇದಕ್ಕೆ ಸಂಬಂಧಿಸಿದ ವೈದ್ಯಕೀಯ ಉಪಕರಣಗಳ ಅವಶ್ಯತೆ ಇರುವುದು. ಈ ಉಪಕರಣಗಳ ವಿವರವನ್ನು ಜಯದೇವ ಹೃದ್ರೋಗ ಆಸ್ಪತ್ರೆಯಿಂದ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಧಾರವಾಡ ನಗರದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣ

4054 (4731) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಕಲಾವಿದರ, ಸಾಹಿತಿಗಳ ಸಂಗೀತಗಾರರ ಸಾಂಸ್ಕೃತಿಕ ನಗರವಾಗಿರುವುದು ಸರ್ಕಾರ ಗಮನಿಸಿದೆಯೇ? ಹಾಗಾದರೆ, ನಗರದ ಮಧ್ಯಭಾಗದಲ್ಲಿ ನಿವೇಶನ ನೀಡಿ ಸರ್ಕಾರ ಘೋಷಿಸಿರುವಂತೆ ಸಂಸ್ಕೃತಿ ಭವನದ ಕಟ್ಟಡ ಕಟ್ಟಲು ಯಾವಾಗ ಪ್ರಾರಂಭಿಸಲಾಗುವುದು?

ಆ) ಧಾರವಾಡ ಕರ್ನಾಟಕ ಪ್ರತಿಷ್ಠಿತ ಶೈಕ್ಷಣಿಕ ಸಾಂಸ್ಕೃತಿಕ ನಗರ ಮತ್ತು ಬೆಂಗಳೂರು ರಾಜಧಾನಿಯ ನಂತರದ ಎರಡನೇ ಮಹಾನಗರವೆಂದು ಸರ್ಕಾರ ಪರಿಗಣಿಸಿ ಕಟ್ಟಡಕ್ಕೆ ಮಹತ್ವ ನೀಡುವುದೇ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಹೌದು.

ಈಗಾಗಲೇ ಇಲಾಖೆಯ ಹೆಸರಿನಲ್ಲಿ ನಿವೇಶನವಿದೆ ಇಲ್ಲಿ ಸಾಂಸ್ಕೃತಿಕ ಸಮುಚ್ಚಯ ನಿರ್ಮಿಸಲು ನೀಲಿ ನಕ್ಷೆ ಮತ್ತು ರೂ. 115.00 ಲಕ್ಷ ಅಂದಾಜು ವೆಚ್ಚ ಸಿದ್ಧವಾಗಿರುತ್ತದೆ. ಆದರೆ ಈ ಕಟ್ಟಡದಲ್ಲಿ ಕಲಾಗ್ಯಾಲರಿ, ಗ್ರಂಥಾಲಯ, ಚಿಕ್ಕ ಸಭಾಂಗಣ, ಇಲಾಖೆ ಕಚೇರಿಗೆ ಸ್ಥಳಾವಕಾಶ ಕಲ್ಪಿಸಿದ್ದು,